## ಸಲಹೆ

ಒಂದು ಪಾರ್ಟಿಯಲ್ಲಿ ಸ್ನೇಹಿತರಾದ ಡಾಕ್ಟರ್ ಗುಂಡೂರಾವ್ ಹಾಗೂ ವಕೀಲ ಪರಮೇಶಿ ಭೇಟಿಯಾದರು. ಗುಂಡೂರಾವ್ ಗೆಳೆಯನ ಮುಂದೆ ಬೇಸರ ಹಂಚಿಕೊಂಡರು. 'ನನಗೆ ಇತ್ತೀಚೆಗೆ ಯಾವುದಾದರೂ ಪಾರ್ಟಿಗೆ ಬರೋದು ಅಂದ್ರೇನೇ ಬೇಸರ ಆಗುತ್ತೆ. ಪಾರ್ಟಿ ಅನ್ನೋದನ್ನೂ ಮರೆತು ಜನ ಹೆಲ್ತ್ ಪ್ರಾಬ್ಲಮ್ ಹೇಳ್ಕೊಂಡು ಬರ್ತಾರೆ. ಫ್ರೀ ಕನ್ಸಲ್ಟೇಶನ್ ಕೊಟ್ಟು ಸಾಕಾಗಿದೆ'. ಅದಕ್ಕೆ ವಕೀಲ ಪರಮೇಶಿ, 'ನನಗೂ ಮೊದಲು ಹಿಂಗೇ ಆಗ್ತಿತ್ತು... ಅದಕೊಂದು ಉಪಾಯ ಕಂಡುಹಿಡಿದೆ... ಈಗ ಆ ಸಮಸ್ಯೆ ಇಲ್ಲ' ಎಂದ. 'ಏನಯ್ಯ ಅದು ಉಪಾಯ? ನನಗೂ ಹೇಳು' ಎಂದು ವಿನಂತಿಸಿದರು ಡಾಕ್ಟರ್.



'ಏನಿಲ್ಲ, ಸಭೆ–ಸಮಾರಂಭ, ಪಾರ್ಟಿಗಳಲ್ಲೆಲ್ಲಾ ಬಿಟ್ಟಿ ಸಲಹೆ ಕೇಳುವ ಜನರ ಮನೆಗೆ ಮಾರನೇ ದಿನವೇ ಬಿಲ್ ಕಳಿಸಿ ಬಿಡ್ತೀನಿ. ಈಗ ಯಾರೂ ಸಿಕ್ಕ ಸಿಕ್ಕಲ್ಲೆಲ್ಲಾ ಕಾನೂನು ಸಲಹೆ ಕೇಳಲ್ಲ' ಎಂದ ಪರಮೇಶಿ.

**ಅನುಪಮಾ ಎಸ್.ವಿ.**

---



ಕಲೆ: ಗಣೇಶ ಆಚಾರ್ಯ

## ಕಾನ್ವೆಂಟ್ vs ಗವರ್ನಮೆಂಟ್

ಕಾನ್ವೆಂಟ್ ಶಾಲೆಯಲ್ಲಿ ಓದುವ ಮನೋಜ ಹಾಗೂ ಸರ್ಕಾರಿ ಶಾಲೆಯಲ್ಲಿ ಓದುವ ಮಹೇಶ ಮಳೆ ನೀರಲ್ಲಿ ಆಟ ಆಡ್ತಾ ಆಡ್ತಾ ಗೆಳೆಯರಾಗಿದ್ದರು. ಮಳೆ ಬಂದು ನಿಂತ ನಂತರ ಆಗಾಗ ಶಾಲೆಗೆ ಚಕ್ಕರ್ ಹೊಡೆದು ಇಬ್ಬರೂ ಮಳೆ ನೀರು ಹರಿಯುವ ಜಾಗಕ್ಕೆ ಓಡಿ ಬರ್ತಾ ಇದ್ದರು. ಒಂದಿನ ಮನೋಜ ಹೇಳಿದ, 'ನನ್ನನ್ನ ಶಾಲೆಗೆ ಕರ್ಕೊಂಡು ಹೋಗೋಕೆ ವ್ಯಾನ್ ಬರುತ್ತೆ ಗೊತ್ತಾ?' ಎಂದು. ಮಹೇಶ ನಗುತ್ತ ಹೇಳಿದ, 'ಅದೇನ್ ಮಹಾ? ನನ್ನನ್ನ ಶಾಲೆಗೆ ಎಳ್ಕೊಂಡ್ ಹೋಗೋಕೇ ನಮ್ಮ ಹೆಡ್‌ಮೇಷ್ಟ್ರೇ ಬರ್ತಾರೆ, ಗೊತ್ತಾ?' ಎಂದ.

**ಸುವರ್ಣಾ ಸಿ.ಎಂ.**